# ಶ್ರೀಮಾತೆಯವರನ್ನು ಕುರಿತು ಶ್ರೀರಾಮಕೃಷ್ಣರು

[ಒಂದು ದಿನ ಗೋಲಾಪ್‌ಮಾಗೆ ಶ್ರೀರಾಮಕೃಷ್ಣರು ಹೇಳಿದರು] 'ಅವಳು ಶಾರದೆ ಸಾಕ್ಷಾತ್ ಸರಸ್ವತಿ—ಜ್ಞಾನವೀಯಲು ಬಂದಿರುವಳು. ರೂಪವಿದ್ದರೆ ಜನರು ಕೆಟ್ಟ ದೃಷ್ಟಿಯಿಂದ ನೋಡಿ ಅವರಿಗೆ ಹಾನಿಯಾದೀತೆಂದು ಈ ಬಾರಿ ಆಕೆ ತನ್ನ ರೂಪವನ್ನು ಮರೆ ಮಾಚಿದ್ದಾಳೆ.' [ಇನ್ನೊಮ್ಮೆ ಹೇಳಿದರು] 'ಆಕೆ ಜ್ಞಾನದಾಯಿನೀ, ಮಹಾ ಬುದ್ಧಿಮತೀ. ಅವಳೇನು ಸಾಮಾನ್ಯ ವ್ಯಕ್ತಿಯೆ? ಅವಳು ನನ್ನ ಶಕ್ತಿ.' [ಹೃದಯನಿಗೆ ಒಮ್ಮೆ ಹೇಳಿದರು] 'ನೋಡು ಅವಳ ಹೆಸರು ಶಾರದಾ, ಅವಳು ಸರಸ್ವತಿ. ಅದಕ್ಕೇ ಒಡವೆ ಧರಿಸುವುದೆಂದರೆ ಇಷ್ಟ.'

[ 'ಶ್ರೀರಾಮಕೃಷ್ಣರಿಗೂ ಶ್ರೀಮಾತೆಯವರಿಗೂ ಎಷ್ಟು ವ್ಯತ್ಯಾಸ! ಶ್ರೀರಾಮಕೃಷ್ಣರು ಯಾವಾಗಲೂ ಭಗವಚ್ಚಿಂತನೆಯಲ್ಲಿರುತ್ತಿದ್ದರು, ಆದರೆ ಶ್ರೀಮಾತೆಯವರಾದರೂ ಸಂಸಾರದ ಕೆಸರಿನಲ್ಲಿ ಸಿಲುಕಿಕೊಂಡಿದ್ದಾರೆ' ಎಂದು ಭಾವಿಸಿದ ಯೋಗೀನ್ ಮಾಗೆ ಶ್ರೀರಾಮಕೃಷ್ಣರು ಹೇಳಿದರು]: ಗಂಗೆಯಲ್ಲಿ ಯಾರು ಎಷ್ಟೇ ಕಲ್ಮಶಗಳನ್ನು ತೇಲಿಸಲಿ, ಗಂಗೆಯನ್ನು ಅದು ಎಂದಾದರೂ ಅಪವಿತ್ರಗೊಳಿಸಲು ಸಾಧ್ಯವೇ? ಗಂಗೆಗೆ ಏನಾದರೂ ತಗಲುತ್ತದೆಯೇ? ಆಕೆಯನ್ನು (ಶಾರದಾದೇವಿಯವರನ್ನು) ಆ ರೀತಿ ಎಂದು ತಿಳಿ. ಆಕೆ ಮತ್ತು ಇದು (ತಮ್ಮನ್ನು ತೋರುತ್ತ) ಅಭೇದವೆಂದು ತಿಳಿ.

[ಕುಡುಕನಾಗಿದ್ದ ಕಾಲೀಪದಘೋಷನ ಪತ್ನಿ ವಿಷಣ್ಣ ವದನಳಾಗಿ ತೀವ್ರ ಮನೋವೇದನೆಯೊಂದಿಗೆ ಬಂದು ಶ್ರೀರಾಮಕೃಷ್ಣರ ಮುಂದೆ ತನ್ನ ಮನದಳಲನ್ನು ತೋಡಿಕೊಂಡಾಗ ಶ್ರೀಮಾತೆಯವರನ್ನು ತೋರಿಸುತ್ತ] 'ನೋಡು, ಅಲ್ಲಿ ಒಬ್ಬಳು ಹೆಂಗಸಿದ್ದಾಳೆ. ಅವಳ ಮುಂದೆ ನಿನ್ನ ದುಃಖವನ್ನೆಲ್ಲ ಹೇಳಿಕೊಂಡರೆ ಅವಳಿಗೆ ಎಲ್ಲ ಮಂತ್ರೌಷಧಿಗಳೂ ಗೊತ್ತು. ಈ ವಿಷಯದಲ್ಲಿ ಅವಳ ಶಕ್ತಿ ನನಗಿಂತ ಹಿರಿದು' ಎಂದು ನಹಬತಿಗೆ ಕಳಿಸಿದರು.

[ಶ್ರೀಮಾತೆಯವರು ಸ್ವಭಾವತಃ ಧಾರಾಳವಾಗಿ ಮುಕ್ತ ಹಸ್ತದಿಂದ ತಮಗಾಗಿ ಭಕ್ತರು ತರುವುದನ್ನೆಲ್ಲಾ ನೀಡಿಬಿಡುತ್ತಿದ್ದರು. ಶ್ರೀರಾಮಕೃಷ್ಣರು ಒಮ್ಮೆ ಆಕ್ಷೇಪಿಸಿದಾಗ ಮರುಮಾತಾಡದೆ ಕೂಡಲೆ ನಹಬತಿಗೆ ಹೊರಟುಹೋದರು. ಶ್ರೀರಾಮಕೃಷ್ಣರು ಮನನೊಂದು ರಾಮಲಾಲನಿಗೆ] 'ಓ ರಾಮಲಾಲ್, ಹೋಗು, ನಿನ್ನ ಚಿಕ್ಕಮ್ಮನನ್ನು ಸ್ವಲ್ಪ ಸಮಾಧಾನಪಡಿಸು. ಅವಳಿಗೆ ಕೋಪ ಬಂದರೆ (ತಮ್ಮ ದೇಹದ ಕಡೆ ತೋರಿಸಿ) ಇದರ ಎಲ್ಲವೂ ನಷ್ಟವಾದಂತೆ.' ಎಂದರು.

[ಶ್ರೀಮಾತೆಯವರಿಗೆ ಒಮ್ಮೆ ಅಗೌರವವನ್ನು ತೋರಿಸಿದ ಹೃದಯನಿಗೆ ಎಚ್ಚರಿಕೆಯನ್ನಿತ್ತು ಶ್ರೀರಾಮಕೃಷ್ಣರು ಹೇಳಿದ್ದರು] 'ಓ ಹೃದೆ, (ತಮ್ಮ ದೇಹದ ಕಡೆ ತೋರಿಸಿ) ನೀನು ಇದಕ್ಕೆ ತುಚ್ಛ ಮಾತುಗಳನ್ನು ಆಡಬಹುದು, ಆದರೆ ಅವಳ ವಿಚಾರದಲ್ಲಿ ಹಾಗೆ ಮಾಡಬೇಡ. ಇದರೊಳಗೇನಿದೆಯೊ ಅದು ಹೆಡೆಯೆತ್ತಿದರೆ ನಿನಗೆ ರಕ್ಷಣೆ ಸಿಕ್ಕಿದರೂ ಸಿಗಬಹುದು. ಆದರೆ ಅವಳ ಒಳಗೆ ಏನಿದೆಯೊ ಅದು ಹೆಡೆಯೆತ್ತಿತೆಂದರೆ ಬ್ರಹ್ಮ ವಿಷ್ಣು ಮಹೇಶ್ವರರೂ ನಿನ್ನನ್ನು ರಕ್ಷಿಸಲಾರರು.'

[ವೈರಾಗ್ಯಚಕ್ರವರ್ತಿಯಾಗಿದ್ದ ಶ್ರೀರಾಮಕೃಷ್ಣರ ಎದೆಯಲ್ಲಿ ಎಂತಹ ಸತಿಪ್ರೇಮವಿತ್ತು! ಶ್ರೀರಾಮಕೃಷ್ಣರು ಹಿಂದೆ ತಪಶ್ಚರ್ಯೆಯಲ್ಲಿ ನಿರತರಾಗಿದ್ದಾಗ ಒಮ್ಮೆ ಅವರಿಗೆ ಸೀತೆಯ ದರ್ಶನವಾಗಿತ್ತು, ಆಗ ಸೀತೆಯ ಕೈಯಲ್ಲಿ ವಜ್ರದ ಹರಳಿರುವ ಬಳೆಗಳಿದ್ದುದನ್ನು ಪರಿಶೀಲಿಸಿದ್ದರು. ಅದೇ ರೀತಿಯ ಬಳೆಯನ್ನು ಮಾಡಿಸಿ ಶ್ರೀಮಾತೆಯವರಿಗೆ ನೀಡಿದ್ದರು. ಒಡವೆ ಕೊಟ್ಟು] 'ಇದೇ ನನ್ನ ಅವಳ ಸಂಬಂಧ' ಎಂದು ನಕ್ಕು ನುಡಿದಿದ್ದರು. ❖

# ಶ್ರೀರಾಮಕೃಷ್ಣರನ್ನು ಕುರಿತು ಶ್ರೀಮಾತೆಯವರು

**ನ**ಮ್ಮ ಮಾವನವರು ದೈವಭಕ್ತರು, ಯಾರಿಂದಲೂ ಅವರು ದಾನವನ್ನು ಸ್ವೀಕರಿಸಲಿಲ್ಲ. ತಾವು ಇಲ್ಲದೇ ಇರುವಾಗ ಯಾರಾದರೂ ದಾನ ಕೊಟ್ಟರೆ ಅದನ್ನು ಸ್ವೀಕರಿಸಬಾರದೆಂದು ಅವರು ಮನೆಯಲ್ಲಿ ಹೇಳುತ್ತಿದ್ದರು. ಆದರೆ ನಮ್ಮ ಅತ್ತೆಯವರು ಯಾರಾದರೂ ಏನನ್ನಾದರೂ ಕೊಟ್ಟರೆ ಅದನ್ನು ಅಡುಗೆ ಮಾಡಿ ದೇವರಿಗೆ ನೈವೇದ್ಯಮಾಡಿ ಪ್ರಸಾದವನ್ನು ಎಲ್ಲರಿಗೂ ಹಂಚುತ್ತಿದ್ದರು. ಮಾವನವರಿಗೆ ಇದು ಗೊತ್ತಾದರೆ ಕೋಪಿಸಿಕೊಳ್ಳುತ್ತಿದ್ದರು. ಅವರಿಗೆ ತೀವ್ರ ಭಕ್ತಿ ಇತ್ತು. ಆದ್ದರಿಂದಲೇ ನನ್ನ ಪತಿದೇವರು ಅವರ ಕುಲದಲ್ಲಿ ಹುಟ್ಟಿದರು.

ಶ್ರೀರಾಮಕೃಷ್ಣರು ತಮ್ಮ ದೇಹ ಗಯೆಯಿಂದ ಬಂದಿತೆಂದು ಹೇಳುತ್ತಿದ್ದರು. ಅವರ ತಾಯಿ ಕಾಲವಾದ ಮೇಲೆ ಗಯೆಯಲ್ಲಿ ಪಿಂಡಕೊಡುವಂತೆ ನನಗೆ ಹೇಳಿದರು. ಮಗ ಬದುಕಿರುವಾಗ ಸೊಸೆಗೆ ಪಿಂಡ ಕೊಡುವ ಅಧಿಕಾರವಿಲ್ಲವೆಂದೆ. "ಇಲ್ಲ, ಇಲ್ಲ, ನಿನಗೆ ಅಧಿಕಾರವಿದೆ. ನನಗೆ ಯಾವ ರೀತಿಯಲ್ಲೂ ಗಯೆಗೆ ಹೋಗುವುದಕ್ಕೆ ಆಗುವುದಿಲ್ಲ. ನಾನು ಹೋದರೆ ಹಿಂತಿರುಗಿ ಬರಲು ಸಾಧ್ಯವೆಂದು ತಿಳಿಯುವೆಯಾ?" ಎಂದರು. ಅವರು ಅಲ್ಲಿಗೆ ಹೋಗಲಿಲ್ಲ. ನಾನೇ ಅನಂತರ ಗಯೆಯಲ್ಲಿ ಅದನ್ನು ಸಲ್ಲಿಸಿದೆ.

ನಾನು ನಹಬತಿನಲ್ಲಿರುತ್ತಿದ್ದೆ ನಿಜ, ಆದರೆ ನನ್ನ ಪ್ರಾಣ-ಮನಸ್ಸು ಠಾಕೂರರ ಕೋಣೆಯಲ್ಲೇ ಇರುತ್ತಿತ್ತು. ಅಲ್ಲಿ ಏನು